**ಎಸ್.ಸಿ.ನಂ.10023 /2018**
**ಪಿ.ಡಬ್ಲೂಃ 13**

**ಈ ದಿನ ದಿನಾಂಕಃ 21-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಿ.ಸಿ ಮುಖಾಂತರ 1ನೇ ಆರೋಪಿ ಪರ ಶ್ರೀ ಡಿ ಎಂ ಆರ್ ವಕೀಲರಿಂದಃ**

ನೊಂದ ಮಹಿಳೆಯ ರಕ್ತ ಗುಂಪಿನ ಮಾದರಿಯನ್ನು ನನಗೆ ಕಳಿಸಿರಲಿಲ್ಲ. ಶೀಲ್ ಆಗಿ ಬಂದಂತಹ ಮು.ಮಾ ನ ಮೇಲೆ ಯಾರ ಯಾರ ಸಹಿಗಳು ಇರುತ್ತದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ಮು. ಮಾ 1 ರಿಂದ 3 ರ ಮೇಲೆ ರಕ್ತದ ಕಲೆಗಳನ್ನು ನಾನು ಪರಿಶೀಲನೆ ಮಾಡಿ ವರದಿಯಲ್ಲಿ ತೋರಿಸಿರುತ್ತೇನೆ, ಆದರೆ ಪ್ರತ್ಯೇಕವಾಗಿ ಯಾವ ಯಾವ ಭಾಗಗಳಲ್ಲಿ ರಕ್ತಕಲೆಗಳು ಇದ್ದವು ಎಂದು ನಮೂದು ಮಾಡುವುದಿಲ್ಲ. ಮು ಮಾ 1 ಮತ್ತು 2 ರ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಇದ್ದಲ್ಲಿ ಅದನ್ನೇ ವರದಿಯಲ್ಲಿ ನಮೂದು ಮಾಡುತ್ತೇವೆ ಅದೇ ರೀತಿ ಮು ಮಾ ಗಳ ಮೇಲೆ ಒಂದೇ ಕಡೆ ರಕ್ತದ ಕಲೆ ಇದ್ದಲ್ಲಿ ಅದನ್ನು ನಮೂದು ಮಾಡುತ್ತೇವೆ. ಮು ಮಾ ನೊಂದಿಗೆ ಮಹಜರ್ ಹಾಗೂ ಪಿ.ಎಫ್ ಕಳಿಸಿಕೊಡುವುದಿಲ್ಲ ಕೇಸಿನ ಸಕ್ಷಿಪ್ತ ಮಾಹಿತಿ ಕೊಟ್ಟಿರುತ್ತಾರೆ. ಮು ಮಾ 1 ಮತ್ತು 2 ರ ಮೇಲೆ ರಕ್ತದ ಕಲೆಗಳು ಸ್ಪಷ್ಟವಾಗಿ ಕಂಡುಬರುತ್ತಿತ್ತು. ರಕ್ತದ ಕಲೆಗಳಲ್ಲಿ ಯಾವುದೇ ಬದಲಾವಣೆ ಆಗಿರುವುದು ಕಂಡು ಬಂದಿರುವುದಿಲ್ಲ. ನಾನು ಯಾವುದೇ ಪರಿಶೀಲನೆ ಮಾಡದೇ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿ ಇದೆ**

Sd/-

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ.**